ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಕೃಷಿ ಹವಾಮಾನ ವಿಭಾಗ

ಕೃಷಿ ಹವಾಮಾನ ವಿಭಾಗ, ಜಿ.ಕೆ.ವಿ.ಕೆ, ಬೆಂಗಳೂರು–65

ನಾಯನಹಳ್ಳಿಯ ಕೃಷಿ ಹವಾಮಾನ ಮುನ್ಸೂಚನೆ

ದಿನಾಂಕ: 20.02.15

ಈ ವಾರದ ಮುನ್ಸೂಚನೆ (21-02-15 to 25.02.15 ವರೆಗೆ)

ನಿಯತಾಂಕಗಳು	21.02.15	22.02.15	23.02.15	24.02.15	25.02.15
ಮಳೆ (ಮಿ ಮಿ)	0	0	0	0	0
ಗರಿಷ್ಠ ಉಷ್ಣಾಂಶ(ಡಿ.ಸೆ.)	30	30	31	31	31
ಕನಿಷ್ಠ ಉಷ್ಣಾಂಶ (ಡಿ.ಸೆ.)	16	17	16	16	16
ಮೋಡ (ಪ್ರಮಾಣ)	0	1	0	2	2
ಅರ್ದ್ರತೆ ೭.೨೦ ಬೆ (ಶೇ)	65	65	71	67	68
ಅರ್ದ್ರತೆ ೨.೨೦ ಮ (ಶೇ)	32	30	27	26	27
ಗಾಳಿಯ ವೇಗ (ಕಿ.ಮಿ/ಗಂಟೆಗೆ)	4	3	3	4	4
ಗಾಳಿಯ ದಿಕ್ಕು (ಡಿಗ್ರಿ)	120	150	135	120	115

ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಯ ಪ್ರಕಾರ ಚಿಕ್ಕಬಳ್ಳಾಪುರ ಹಾಗೂ ಸುತ್ತಮುತ್ತ ಮುಂದಿನ ಐದು ದಿನಗಳು ಒಣಹವೆ ಮುಂದುವರೆಯಲಿದೆ. ದಿನದ ಗರಿಷ್ಠ ಉಷ್ಣಾಂಶವು 30.0-31.0°C ಮತ್ತು ಕನಿಷ್ಠ 16-17°C ಇರಲಿದೆ. ಬೆಳಿಗಿನ ಆರ್ದ್ರತೆ ಪ್ರಮಾಣ ಶೇ 65-71% ಇದ್ದು, ಮಧ್ಯಾಹ್ನ 26-32% ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ 3-4 ಕಿ.ಮೀ.ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

ಸಾಮಾನ್ಯ ಸೂಚನೆಗಳು:

- ಹಣ್ಣಿನ ಮರಗಳ ತೋಟದಲ್ಲಿ (ಮಾವು, ಸೀಬೆ) ನೆಲಕ್ಕೆ ತಾಕುವ ರೆಂಬೆ ಕೊಂಬೆಗಳನ್ನು ಕತ್ತರಿಸಿ ಕೀಟ ರೋಗಗಳಿಂದ ರಕ್ಷಿಸುವುದು.
- ಕಟಾವು ಮಾಡಿದ ಧಾನ್ಯಗಳನ್ನು ಚೆನ್ನಾಗಿ ಬಿಸಿಲಿನಲ್ಲಿ ಒಣಗಿಸಿ ಶೇಖರಣೆ ಮಾಡುವುದು.

ಫೆಬ್ರವರಿ ತಿಂಗಳಲ್ಲಿ ಬೆಳೆಯಬಹುದಾದ ಬೆಳೆ ಹಾಗೂ ತಳಿಗಳು:

ಟೊಮ್ಯಾಟೊ: ಅಭಿನವ್, ಅರ್ಕಾ ಸಾಮ್ರಾಟ್, ಪಿ.ಕೆ.ಎಮ್–೧

ರಾಗಿ: ಇಂಡಾಫ್ಲ್–೫, ಇಂಡಾಫ್ಲ್–೮, ಜಿ.ಪಿ.ಯು–೨೮, ಜಿ.ಪಿ.ಯು–೪೮,

ಪಾಪ್‌ಕಾರ್ನ್: ಅಂಬರ್. **ಅಲಸಂದೆ**: ಸಿ–೧೫೨, ಪಿ.ಕೆ.ಬಿ.–೪ (ತರಕಾರಿಗಾಗಿ)

ಕೋಳಿ ಸಾಕಣೆ ಹಾಗೂ ರೇಷ್ಮೆ ಕೃಷಿ: ಸರಿಯಾದ ತಾಪಮಾನವನ್ನು ನಿರ್ವಹಣೆ ಮಾಡಬೇಕು

ಸಸ್ಯ ಸಂರಕ್ಷಣೆ:

ಒಣ ಹವೆ ಇರುವುದರಿಂದ ಬೂದಿ ರೋಗ ಹರಡುವ ಸಾಧ್ಯತೆ ಇರುವುದರಿಂದ ಸೂಕ್ತ ಸಸ್ಯ ಸಂರಕ್ಷಣಾ ಕ್ರಮಗಳನ್ನು ಕೈಗೊಳ್ಳುವುದು. ಮಾವಿನ ಬೆಳೆಯಲ್ಲಿ ಬೂದು ರೋಗ ಕಂಡುಬಂದರೆ, ಸಲ್ಫೆಕ್ಸ್ ಅಥವಾ ಮೈಕ್ಲೊಬ್ಯುಟನಾಲ್ ಅನ್ನು ಬಿಸಿಲು ಕಡಿಮೆ ಇರುವ ಸಮಯದಲ್ಲಿ ಸಿಂಪಡಣೆ ಮಾಡಬೇಕು.

ಆಲೂಗಡ್ಡೆ: ಕೊನೆ ಅಂಗಮಾರಿ ರೋಗ ತೀವ್ರವಾಗಿ ಕಂಡುಬಂದರೆ ಸೈಮೊಕ್ಸಾನಿಲ್+ಮ್ಯಾಂಕೊಜೆಬ್ ಅಥವಾ ರಿಡೊಮಿಲ್ ಗೋಲ್ಡ್ (೨ ಗ್ರಾಂ ಪ್ರತಿ ಲೀಟರ್ ನೀರಿಗೆ) ಅನ್ನು ಸಿಂಪಡಿಸಿ.

ನೋಡಲ್ ಅಧಿಕಾರಿ:
ಕೃಷಿ ಹವಾಮಾನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು